ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1124 (1200)
ಸದಸ್ಯರ ಹೆಸರು	ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ವಿಷಯ	ಕಂದಾಯ ಇಲಾಖೆಯ ಪಿಂಚಣಿ ಯೋಜನೆಯ ಕುರಿತು
ಉತ್ತರಿಸಬೇಕಾದ ದಿನಾಂಕ	22.09.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	ಉತ್ತರ
ಅ) ಕಂದಾಯ ಇಲಾಖೆಯಡಿ ಬರುವ ಪಿಂಚಣಿ ಯೋಜನೆಗಳು ಯಾವುವು? (ವಿವರ ನೀಡುವುದು)	ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಡಿ ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. (ಕೆಳಗಿನ ಪಟ್ಟಿ ನೋಡಿ)

ಕ್ರಮ ಸಂಖ್ಯೆ	ಯೋಜನೆ
1	ವೃದ್ಧಾಪ್ಯ ವೇತನ
2	ವಿಧವಾ ವೇತನ
3	ಅಂಗವಿಕಲ ವೇತನ
4	ಸಂಧ್ಯಾ ಸುರಕ್ಷಾ ಯೋಜನೆ
5	ಮನಸ್ವಿನಿ
6	ಮೈತ್ರಿ
7	ಸಾಲಭಾದೆಯಿಂದ ಆತ್ಮ ಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ
8	ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ
9	ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ

ಆ) ಸದರಿ ಸೌಲಭ್ಯವನ್ನು ಪಡೆಯಲು ಇರುವ ಮಾನದಂಡಗಳೇನು? (ವಿವರ ನೀಡುವುದು)	ಯೋಜನಾವಾರು ಮಾನದಂಡಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ) ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಪ್ರತ್ಯೇಕ ಮಾನದಂಡಗಳೇನಾದರು ಇವೆಯೇ? ಹಾಗಿದ್ದಲ್ಲಿ ವಿವರ ನೀಡುವುದು?	ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಯಾವುದೇ ಪ್ರತ್ಯೇಕ ಮಾನದಂಡಗಳು ಇರುವುದಿಲ್ಲ.

ಸಂಖ್ಯೆ:DSSP-LCQ-26/2021

(ಆರ್.ಅಶೋಕ)

ಕಂದಾಯ ಸಚಿವರು

ಅನುಬಂಧ-1

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ

ಸಾಮಾಜಿಕ ಭದ್ರತೆ ಯೋಜನೆಗಳಡಿ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆ/ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುತ್ತಿರುವ ಮಾನದಂಡಗಳ ವಿವರ

ಕ್ರ. ಸಂ.	ಯೋಜನೆ/ಕಾರ್ಯಕ್ರಮದ ಹೆಸರು	ಪಿಂಚಣಿ ಮೊತ್ತ	ಯೋಜನೆ ಉದ್ದೇಶ	ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ	ಸಲ್ಲಿಸಬೇಕಾದ ದಾಖಲೆಗಳು
1	ವೃದ್ಧಾಪ್ಯ ವೇತನ		ಬಡತನ ರೇಖೆಗಿಂತ ಕೆಳಗಿರುವ ಸಂಕಷ್ಟದಲ್ಲಿರುವ ಹಿರಿಯ ನಾಗರೀಕರಿಗೆ ನೆರವು ನೀಡಿ ಸಮಾಜದ ಮುಖ್ಯವಾಹಿನಿಗೆ ತರುವುದು	• 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಯಸ್ಸಿನ ದೃಢೀಕೃತ ದಾಖಲೆ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ
	ವಯಸ್ಸು 60 ರಿಂದ 64 ವರ್ಷ	600			
	65 ವರ್ಷ ಮೇಲ್ಪಟ್ಟು	1000*			
2	ವಿಧವಾ ವೇತನ	800	ನಿರ್ಗತಿಕ ವಿಧವೆಯರಿಗೆ ಆರ್ಥಿಕ ಸಹಾಯ ಒದಗಿಸುವುದು	• 18 ವರ್ಷ ಮೇಲ್ಪಟ್ಟ ವಿಧವೆಯರು • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಪತಿಯ ಮರಣ ದೃಢೀಕರಣ ಪತ್ರ/ ಸ್ವಯಂ ದೃಢೀಕರಣ ಪತ್ರ • ಬ್ಯಾಂಕ್/ಅಂಚೆ ಖಾತೆ ಪ್ರತಿ
3	ಅಂಗವಿಕಲ ವೇತನ		ಬಡತನ ರೇಖೆಗಿಂತ ಕೆಳಗಿರುವ ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಆರ್ಥಿಕ ಭದ್ರತೆ ಒದಗಿಸುವುದು	• ಶೇ. 40 ಕ್ಕಿಂತ ಹೆಚ್ಚಿನ ಅಂಗವಿಕಲರು • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಯಸ್ಸಿನ ದೃಢೀಕೃತ ದಾಖಲೆ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ • ಅಂಗವಿಕಲತೆ ಶೇಕಡಾವಾರು ವೈದ್ಯಕೀಯ ದೃಢೀಕರಣ ಪತ್ರ
	ಶೇ.40 ಅಂಗವಿಕಲತೆ ಹೊಂದಿರುವವರು	800			
	ಶೇ.75 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು	1400			

* ಸಂಧ್ಯಾ ಸುರಕ್ಷಾ ಯೋಜನೆಯಡಿ ರೂ. 1000/- ರಿಂದ ರೂ. 1200/- ಕ್ಕೆ ಹೆಚ್ಚಿಸಿರುವಂತೆ ವೃದ್ಧಾಪ್ಯ ವೇತನ ಯೋಜನೆಯಡಿ (65 ವರ್ಷ ಮೇಲ್ಪಟ್ಟವರಿಗೆ) ಪಿಂಚಣಿ ಹೆಚ್ಚಳಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

4	ಸಂಧ್ಯಾ ಸುರಕ್ಷಾ ವೇತನ	1200	65 ವರ್ಷ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರೀಕರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವ ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವುದು	• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಯಸ್ಸಿನ ದೃಢೀಕೃತ ದಾಖಲೆ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ
5	ಮನಸ್ವಿನಿ ಯೋಜನೆ	600	ಅವಿವಾಹಿತ/ವಿಚ್ಛೇದಿತ/ಪರಿತ್ಯಕ್ತ ಮಹಿಳೆಯರಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು	• 40 ರಿಂದ 64 ವರ್ಷ ವಯಸ್ಸಿನೊಳಗಿನ ಅವಿವಾಹಿತ ಮಹಿಳೆಯರು • ವಿಚ್ಛೇದಿತ ಮಹಿಳೆಯರು • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಯಸ್ಸಿನ ದೃಢೀಕೃತ ದಾಖಲೆ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ • ವಿಚ್ಛೇದಿತ ಪ್ರಮಾಣ ಪಡೆಯದಿದ್ದಲ್ಲಿ ಸ್ವಯಂ ದೃಢೀಕರಣ ಪತ್ರ
6	ಮೈತ್ರಿ ಯೋಜನೆ	600	ಲಿಂಗತ್ವ ಅಲ್ಪಸಂಖ್ಯಾತರಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು	• 25 ರಿಂದ 64 ವರ್ಷ ವಯಸ್ಸಿನೊಳಗಿನ ಲಿಂಗತ್ವ ಅಲ್ಪ ಸಂಖ್ಯಾತರು • ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು. (ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ)	• ಆಧಾರ್‌ಕಾರ್ಡ್ ಪ್ರತಿ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ • ಸ್ವಯಂ ದೃಢೀಕರಣ ಪತ್ರ • ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ರಿಂದ ಪಡೆದ ಪ್ರಮಾಣ ಪತ್ರ
7	ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ	2000	ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಹಿತಾಸಕ್ತಿ ಕಾಪಾಡುವುದು	• ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತ ರೈತನ ಪತ್ನಿಯಾಗಿದ್ದು, ಕೃಷಿ ಇಲಾಖೆಯಿಂದ ರೈತರ ಆತ್ಮಹತ್ಯೆ ಪ್ರಕರಣಗಳಡಿ ಗುರುತಿಸಿ ಪರಿಹಾರ ಪಡೆದುಕೊಂಡಿರುವವರಿಗೆ	• ಆಧಾರ್‌ಕಾರ್ಡ್ ಪ್ರತಿ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ • ಕೃಷಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪ್ರತಿ

೮	**ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ**	೩೦೦೦	ಆಸಿಡ್ ದಾಳಿಗೆ ಒಳಗಾದ ಎಲ್ಲಾ ಮಹಿಳೆಯರಿಗೆ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡುವ ಹಾಗೂ ಸಮಾಜದಲ್ಲಿ ಗೌರವಪೂರ್ವಕವಾಗಿ ಬದುಕಲು ಅವಕಾಶ ಕಲ್ಪಿಸುವುದು	• ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈಗಾಗಲೇ ಗುರುತಿಸಿ ಸುರಕ್ಷಾ ಯೋಜನೆಯಡಿ ಪರಿಹಾರ ಪಡೆದುಕೊಂಡಿರುವವರಿಗೆ	• ಆಧಾರ್‌ಕಾರ್ಡ್ ಪ್ರತಿ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ • ಮಹಿಳಾ ಮತ್ತು ಮಕ್ಕಳ ಅಭವೃದ್ಧಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪ್ರತ
೯	**ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ**		ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಎಂಡೋಸಲ್ಫಾನ್ ಸಂತ್ರಸ್ಥರಿಗೆ ಆರ್ಥಿಕ ಸಹಾಯ ಒದಗಿಸುವುದು	• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುತಿಸಿರುವ ಫಲಾನುಭವಿಗಳು	• ಆಧಾರ್‌ಕಾರ್ಡ್ ಪ್ರತಿ • ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ • ಬ್ಯಾಂಕ್/ಅಂಚೆ ಖಾತೆ ಪ್ರತಿ
	ಶೇ.೨೫ ರಿಂದ ೫೯ ಅಂಗವಿಕಲತೆ ಹೊಂದಿರುವವರು	೨೦೦೦			
	ಶೇ.೬೦ ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು	೪೦೦೦			

- **1 ರಿಂದ ೯ ಯೋಜನೆಗಳ ಮಂಜೂರಾತಿ ಪ್ರಾಧಿಕಾರಿ:** ತಾಲ್ಲೂಕಿನ ಆಯಾ ಹೋಬಳಿಯ ಉಪ ತಹಶೀಲ್ದಾರರು
- **ಅನುಷ್ಠಾನಾಧಿಕಾರಿಗಳು:** ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು
- **ಅರ್ಜಿ ಸಲ್ಲಿಸಬೇಕಾದ ವಿಧಾನ:** ಉದ್ದೇಶಿತ ಫಲಾನುಭವಿಯು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ತಮ್ಮ ವಾಸಸ್ಥಳದ ವ್ಯಾಪ್ತಿಯಲ್ಲಿ ಬರುವ ಅಟಲ್‌ಜೀ ಜನಸ್ನೇಹಿ ಕೇಂದ್ರ/ನಾಡ ಕಛೇರಿಗೆ ಖುದ್ದಾಗಿ ನೀಡುವುದು
- **ಹೆಚ್ಚಿನ ಮಾಹಿತಿ ಪಡೆಯಲು ಫಲಾನುಭವಿಗಳು ಸಂಪರ್ಕಿಸಬೇಕಾದ ಸಮೀಪದ ಕಛೇರಿ ವಿಳಾಸ/ದೂರವಾಣಿ:** ತಾಲ್ಲೂಕಿನ ಆಯಾ ಹೋಬಳಿಯ ಉಪ ತಹಶೀಲ್ದಾರರು/ತಹಶೀಲ್ದಾರರು